ವಿಶಾಖ ಎನ್.

# ಎರಡು ಭಾಗಗಳಲ್ಲಿ ಬರಲಿದೆ ಹೊಸ ರಾಮಾಯಣ

‘ರಾಮಾಯಣ’ ಮರುಕಥನ ದರ್ಶನ ಎಷ್ಟು ಸತ್ವಯುತ ಹಾಗೂ ಫಲದಾಯಕ ಎನ್ನುವುದು ಗೊತ್ತಾದದ್ದು ರಮಾನಂದ ಸಾಗರ ಅದನ್ನು ಧಾರಾವಾಹಿಯ ರೂಪದಲ್ಲಿ ದೂರದರ್ಶನಕ್ಕೆ ತಂದಾಗ. ಎಷ್ಟೋ ಜನ ಮಿಂದು ಕುಳಿತೇ ಭಾನುವಾರ ಆ ಧಾರಾವಾಹಿ ಕಣ್ತುಂಬಿಕೊಳ್ಳುತ್ತಿದ್ದರು. ಹಿಂದಿಯಲ್ಲಿ ಅದು ಪ್ರಸಾರವಾದರೂ, ಪ್ರಾದೇಶಿಕ ಭಾಷೆಗಳಲ್ಲಿ ಅದರ ಇಂಚಿಂಚೂ ಸಂಭಾಷಣೆ ಮುದ್ರಿಸುವ ಕೆಲಸವನ್ನು ಪತ್ರಿಕೆಗಳು ಕೂಡ ಆಗ ಮಾಡಿದ್ದವು. ಕೆಲವರಂತೂ ಟೀವಿ ಪರದೆ ಮೇಲಿನ ರಾಮನಿಗೆ ಆರತಿ ಎತ್ತಿ ಭಕ್ತಿಭಾವ ಮೆರೆದಿದ್ದರು. ಈಗ ಮತ್ತೆ ರಾಮಾಯಣ ದರ್ಶನಕ್ಕೆ ಕಾಲ ಕೂಡಿಬಂದಿದೆ. ನಿತೇಶ್ ತಿವಾರಿ ಅದನ್ನು ತಾಂತ್ರಿಕ ವೈಭವದಿಂದಲೂ, ಮೂಲ ಕಥಾ ಆಶಯಕ್ಕೆ ಚ್ಯುತಿ ಬಾರದಂತಹ ಕುಶಲತೆಯಿಂದಲೂ ಕಟ್ಟಿಕೊಡುವುದಾಗಿ ಸಂಕಲ್ಪ ಮಾಡಿದ್ದಾರೆ.

ಈ ಸಿನಿಮಾ ಸೆಟ್ಟೇರುವ ಸುದ್ದಿ ಹಲವು ತಿಂಗಳುಗಳಿಂದ ಚಾಲ್ತಿಯಲ್ಲಿ ಇತ್ತಾದರೂ ಅಧಿಕೃತವಾಗಿ ಪ್ರಕಟಣೆ ಹೊರಬಿದ್ದಿರಲಿಲ್ಲ. ಇದೀಗ ಸಿನಿಮಾ ಎರಡು ಭಾಗಗಳಲ್ಲಿ ಹೊರಬರುವ ಸುದ್ದಿಯನ್ನು ಖುದ್ದು ನಿತೇಶ್ ತಿವಾರಿ ಪ್ರಕಟಿಸಿದ್ದಾರೆ.

ಈ ಚಿತ್ರದಲ್ಲಿ ರಾಮನ ಪಾತ್ರಧಾರಿ ರಣಬೀರ್ ಕಪೂರ್. ಸೀತೆಯಾಗಿ ಸಾಯಿ ಪಲ್ಲವಿ ಅಭಿನಯಿಸಲು ನಿಕ್ಕಿಯಾಗಿದ್ದಾರೆ. ಅದಕ್ಕೂ ಮುಖ್ಯವಾಗಿ ರಾಕಿಂಗ್ ಸ್ಟಾರ್ ಯಶ್ ಚಿತ್ರದಲ್ಲಿ ರಾವಣನ ಪಾತ್ರಕ್ಕೆ ಜೀವ ತುಂಬಲಿದ್ದಾರೆ.

ಮಧು ಮಂಟೆನಾ ಹಾಗೂ ಅಲ್ಲೂ ಅರವಿಂದ್ ಈ ಸಿನಿಮಾ ಕೇಳುವ ಬಂಡವಾಳ ತೊಡಗಿಸಲಿದ್ದಾರೆ. ಮಧು ಹಲವು ಭಾಷೆಗಳಲ್ಲಿ ಚಿತ್ರ ನಿರ್ಮಾಣದಲ್ಲಿ ಕೈ ಪಳಗಿಸಿಕೊಂಡವರು. ತಮಿಳಿನಲ್ಲಿ ‘ಗಜಿನಿ’ ಸಿನಿಮಾ ಯಶಸ್ವಿಯಾದಾಗ, ಅದನ್ನು ಹಿಂದಿಗೆ ರೀಮೇಕ್ ಮಾಡಲು ಹಣ ಹೂಡಿದ್ದವರು ಅವರು. ಹಿಂದಿಯಲ್ಲಿ ಅದು ಎಂಥ ದೊಡ್ಡ ಯಶಸ್ಸು ಕಂಡಿತು ಎನ್ನುವುದನ್ನು ನಾವು ನೋಡಿದ್ದೇವೆ. ‘ಸೂಪರ್ 30’ ಹಿಂದಿ ಚಿತ್ರವನ್ನು ಕಡಿಮೆ ಬಜೆಟ್‌ನಲ್ಲಿ ತಯಾರಿಸಿ ದೊಡ್ಡ ಲಾಭ ಮಾಡಿದ ಮೆದುಳು ಅವರದ್ದು.

ಇನ್ನು ನಿತೇಶ್ ಅವರು ಬಾಂಬೆ ಐಐಟಿಯಲ್ಲಿ ಮೆಟಲರ್ಜಿ ವಿಷಯದಲ್ಲಿ ಪದವಿ ಕಲಿತಿದ್ದವರು. ‘ದಂಗಲ್’ ಹಿಂದಿ ಸಿನಿಮಾದಲ್ಲಿ ಅವರು ಕೊಟ್ಟ ಸಿನಿಮಾ ವ್ಯಾಕರಣ 1200 ಕೋಟಿ ರೂಪಾಯಿಗಳಿಕೆ ತಂದುಕೊಟ್ಟಿತು. ‘ಛಿಛೋರೆ’ ಅವರ ಹೊಸಕಾಲದ ಕಥಾಕಾಲಕ್ಷೇಪ ಹೇಳುವ ಕ್ರಮಕ್ಕೆ ಸಾಕ್ಷಿ. ಹೊಸ ರಾಮಾಯಣವು ಎರಡು ಭಾಗಗಳಲ್ಲಿ ತೆರೆಗೆ ಬರಲಿದೆ. ಮೊದಲ ಭಾಗವು 2025ರಲ್ಲಿ ಹಾಗೂ ಎರಡನೇ ಭಾಗ 2026ರಲ್ಲಿ ಬಿಡುಗಡೆಯಾಗಲಿವೆ. ■


ನಿತೇಶ್ ತಿವಾರಿ


ಸಾಯಿ ಪಲ್ಲವಿ


ರಣಬೀರ್ ಕಪೂರ್



# ಶ್ರೀಲೀಲಾ ನಾದಲೀಲೆ

ಶ್ರೀಲೀಲಾ – ಎರಡು ವರ್ಷಗಳ ಹಿಂದೆ ತೆಲುಗು ಚಿತ್ರರಂಗದ ಪಡಸಾಲೆಯಲ್ಲಿ ಪ್ರತಿಧ್ವನಿಸುತ್ತಿದ್ದ ಹೆಸರು. ಈಗ ಆ ಉಬ್ಬರ ತುಸು ತಗ್ಗಿದೆಯಾದರೂ ಅವರ ಆತ್ಮವಿಶ್ವಾಸ ಹಾಗೆಯೇ ಇದೆ.

ಒಂದು ಸಂದರ್ಭದಲ್ಲಿ ಒಂಬತ್ತು ಚಿತ್ರಗಳಿಗೆ ಅವರು ಒಂದಾದ ಮೇಲೆ ಒಂದರಂತೆ ಸಹಿ ಹಾಕಿದ್ದರು. ಈಗ ಪವನ್ ಕಲ್ಯಾಣ್ ಜೊತೆಯಲ್ಲಿ ‘ಉಸ್ತಾದ್ ಭಗತ್ ಸಿಂಗ್’ ಚಿತ್ರೀಕರಣದಲ್ಲಿ ತೊಡಗಿದ್ದಾರೆ. ಒಂದು ಕಾಲನ್ನು ರಾಜಕೀಯ ಮೊಗಸಾಲೆಯಲ್ಲಿ ಇಟ್ಟಿರುವ ಪವನ್ ಕಲ್ಯಾಣ್ ಅವರ ಒಟ್ಟಾರೆ ಕಾರ್ಯನಿರ್ವಹಣೆಯ ವೈಖರಿಯನ್ನು ಶ್ರೀಲೀಲಾ ಅಧ್ಯಯನದ ಪರಿಕರ ಆಗಿಸಿಕೊಂಡಿದ್ದಾರೆ.

ಶ್ರೀಲೀಲಾ ಅವರಲ್ಲಿ ಸಹಜ ನೃತ್ಯ ಲಾಲಿತ್ಯ ಒಂದು ಇದೆ. ನೃತ್ಯ ನಿರ್ದೇಶಕರು ಸೆಟ್‌ನಲ್ಲೇ ಅವರಿಂದ ಹಠಾತ್ ಏನನ್ನೋ ಸೃಜಿಸಿ ಹೆಜ್ಜೆ ಹಾಕಿಸುವ ಕ್ರಮವೊಂದನ್ನು ‘ಗುಂಟೂರು ಕಾರಂ’ ತೆಲುಗು ಸಿನಿಮಾದಲ್ಲಿ ಅನುಸರಿಸಿದ್ದರು. ಅದು ಫಲ ಕೂಡ ಕೊಟ್ಟಿತ್ತು. ಮಹೇಶ್ ಬಾಬು ಅವರಂತಹ ಸೂಪರ್ ಸ್ಟಾರ್ ಕೂಡ ಈ ಹುಡುಗಿಯ ನೃತ್ಯ ಲಾಲಿತ್ಯವನ್ನು ಹಾಡಿ ಹೊಗಳಿದ್ದರು.

ಚಿನಕುರುಳಿಯಂತೆ ಕಾಣುವ ಶ್ರೀಲೀಲಾ ಮನಸ್ಸಿಗೆ ತುಸು ನೆಮ್ಮದಿ ಬೇಕು ಎಂದಾಗ ಇಷ್ಟದ ವೀಣೆಯ ಎದುರು ಕೂರುತ್ತಾರೆ. ಅದರ ತಂತಿಗಳ ಮೇಲೆ ಬೆರಳು ಆಡಿಸುತ್ತಿದ್ದರೆ, ನಾದಲೋಕವೊಂದು ತಂತಾನೇ ತೆರೆದುಕೊಂಡು ಅವರನ್ನು ಸಂತೈಸುತ್ತದಂತೆ. ಅವರ ಈ ಸಂಗೀತಾನುಭವ ವಿಶೇಷವಂತೂ ಹೌದು. ■